ಶ್ರೀ ರಾಮದಾಸ್ — ಸನ್ಮಾನ್ಯ ಅಧ್ಯಕ್ಷರೇ, ಒಟ್ಟು ಆ ದೇವಪುರ ಕ್ಷೇತ್ರದ ಅಮೃತ ಮಹಲ್ ಕಾವಲ್‌ನಲ್ಲಿ ೮೮೯ ಎಕರೆ ಜಮೀನಿದೆ. ಅದರಲ್ಲಿ ೩೨೧ ಎಕರೆಯನ್ನು ಸಾಗುವಳಿಗೆ ಕೊಟ್ಟಿದ್ದಾರೆ. ೩೦ ಎಕರೆ ಜಮೀನನ್ನು ಬಗರ್‌ಹುಕುಂನಲ್ಲಿ ಹರಿಜನರು ಸಾಗುವಳಿ ಮಾಡುತ್ತಿದ್ದರು. ಏತಕ್ಕೆ ನೀವು ಅವರನ್ನು ಗುರುತಿಸಿಲ್ಲ ? ಮತ್ತು ಸಾಗುವಳಿ ಚೀಟಿಯನ್ನು ಏಕೆ ಕೊಟ್ಟಿಲ್ಲ ?

ಶ್ರೀ ಬಿ. ಆರ್. ಯಾವಗಲ್ (ಕಂದಾಯ ಮಂತ್ರಿಗಳ ಪರವಾಗಿ).— ಒಟ್ಟು ಆ ಕ್ಷೇತ್ರದಲ್ಲಿ ೩೫೯ ಎಕರೆ ೧೮ ಗುಂಟೆ ಜಮೀನನ್ನು ಬೇರೆಬೇರೆ ಜನರಿಗೆ ಬೇರೆಬೇರೆ ರೀತಿಯಲ್ಲಿ ೧೯೫೮ ರಿಂದ ೧೯೮೪ ರವರೆಗೆ ಕೊಟ್ಟಿದ್ದೇವೆ. ಆದರೆ ಇವರು ಹೇಳಿಂದತೆ ಈ ೩೦ ಜನ ಹರಿಜನರು ಬಗರ್‌ಹುಕಂನಲ್ಲಿ ಸಾಗುವಳಿ ಮಾಡುತ್ತಿದ್ದರು, ಈ ಅಂಶ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ಇವರ ಬಗ್ಗೆ ಏನೂ ಕ್ರಮ ವನ್ನು ತೆಗೆದುಕೊಂಡಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಜಿ. ರಾಮದಾಸ್.—ಅವರೆಲ್ಲರೂ ಅವಿದ್ಯಾವಂತ ಜನರು ಇದ್ದಾರೆ. ಮೊದಲು ಸಾಗುವಳಿ ಮಾಡಿದವರು ವಿದ್ಯಾವಂತರು. ಸ್ವಲ್ಪ ಕಾನೂನನ್ನು ಅನುಸರಿಸಿಕೊಂಡು ಸಾಗುವಳಿ ಚೀಟಿಯನ್ನು ತೆಗೆದುಕೊಂಡರು. ಆದರೆ ಈ ಹರಿ ಜನರು ಮುಗ್ಧರು. ಅವರು ಹತ್ತು ವರ್ಷಗಳಿಂದ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ದಯಮಾಡಿ ನಿಮ್ಮ ಕಾನೂನನ್ನು ಸಡಿಲಿಸಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್,— ಮಾನ್ಯ ಅಧ್ಯಕ್ಷರೇ, ಇಂಥ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಕಾಯ್ದೆ ಮಿತಿಯಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಮಾನ್ಯ ಸದಸ್ಯರು.— ಕೊನೆಯ 'ಇ' 'ಪ್ರಶ್ನೆಗೆ' 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದೀರಿ. ಬಹುತೇಕವಾಗಿ ರಾಜ್ಯಾದ್ಯಂತ ಬಡ ಜನರು, ಪರಿಶಿಷ್ಟ ಜನರು ಸಾಗುವಳಿ ಮಾಡುತ್ತಿದ್ದಾರೆ. ಆದ್ದರಿಂದ ಕಾನೂನನ್ನು ಮರು ಪರಿಶೀಲನೆ ಮಾಡಿ ಬಗರ್‌ಹುಕುಂನಲ್ಲಿ ಹರಿಜನರಿಗೆ ಅವಕಾಶ ಮಾಡಿಕೊಡಬೇಕು. ಅಲ್ಲದೆ, ಅವರಿಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಗ ನೀವು ಗೊತ್ತು ಮಾಡಿದ್ದ ಕೊನೆಯ ತಾರೀಖು ಸಾಕಷ್ಟು ಪ್ರಚುರ ಮಾಡಲಿಲ್ಲ. ಸಕಾಲದಲ್ಲಿ ಅರ್ಜಿ ಹಾಕದಿದ್ದವರು ಬಹಳ ಜನ ಇದ್ದಾರೆ, ಆದ್ದರಿಂದ ಮರು ಪರಿಶೀಲನೆ ಮಾಡಿ ಇವರೆಲ್ಲರ ಅರ್ಜಿಯನ್ನು ತೆಗೆದುಕೊಂಡು ಬಗರ್‌ಹುಕುಂ ಸೆಟ್‌ರೈಟ್ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆಯೇ ?

ಶ್ರೀ ಬಿ. ಆರ್. ಯಾವಗಲ್.— ಈ ಬಗ್ಗೆ ಸರ್ಕಾರ ಸಮಗ್ರ ಚಿಂತನೆಯ ನಂತರ ಪರಿಶೀಲನೆ ಮಾಡುತ್ತದೆ.

ರಾಜ್ಯದಲ್ಲಿ ಕಾಫಿ ಬೆಳೆಗಾರರು ಸರಕಾರಿ ಭೂಮಿಯನ್ನು ಒತ್ತುವರಿ ಮಾಡಿದ ಬಗ್ಗೆ

೧೩೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೆ ?.—

ಅ) ರಾಜ್ಯದಲ್ಲಿ ಕಾಫಿ ಬೆಳೆಗಾರರು ಎಷ್ಟು ಎಕರೆ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಹಾಗೂ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮಾಡಿದ್ದಾರೆ ?

ಆ) ಒತ್ತುವರಿ ಭೂಮಿಯನ್ನು ಖಾಯಂಗೊಳಿಸಲಾಗಿದೆಯೆಂ ?

ಇ) ಹಾಗಿದ್ದಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ಬಡರೈತರಿಗೆ ಕೊಡಲು ಸರಕಾರದವರ ಪರಿಶೀಲನೆಯಲ್ಲೇನಾದರೂ ಇದೆಯೆ?

ಶ್ರೀ ಎಸ್. ಆರ್. ಬೊಮ್ಮಾಯಿ:—(ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಕಾಫಿ ಬೆಳೆಗಾರರು ಒಟ್ಟು ೨೦೦ ಎಕರೆ ೨ ಗುಂಟೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ.

		ಎ—ಗು
೧) ಹಾಸನ	—	೩೦೯—೨೫
೨) ಚಿಕ್ಕಮಗಳೂರು	—	೧೨೧೯—೩೦
೩) ಕೊಡಗು		೪೬೪೦—೦೧
೪) ಶಿವಮೊಗ್ಗ	—	೩೭—೨೦
೫) ದಕ್ಷಿಣ ಕನ್ನಡ	—	೩೦—೮೬
	ಒಟ್ಟು	೨೦೦೬—೦೨

ಆ) ಇಲ್ಲ

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ಹೆಚ್ಚುವರಿ ಭೂಮಿ ೨೦೦೦ ಎಕರೆ ೨ ಗುಂಟೆ ಇದೆ. ನಾಲ್ಕೈದರಷ್ಟು ಜಮೀನನ್ನು ಒತ್ತುವರಿ ಆಗುತ್ತಿದೆ. ಇದರ ಬಗ್ಗೆ ನಿಖರವಾದ ಅಭಿಪ್ರಾಯ ಇದೆಯೇ ? ಮತ್ತು ಒತ್ತುವರಿ ಜಮೀನನ್ನು ಖಾಯಂಗೊಳಿಸಲಾಗಿದೆಯೇ ಎಂದರೆ 'ಇಲ್ಲ' ಎಂದು ಹೇಳಿದ್ದೀರಿ. ಅವರನ್ನು ಬಿಡಿಸಲಿಕ್ಕೆ ಏನಾದರೂ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ? ಈ ಕಾಫಿ ಬೆಳೆಗಾರರ ಜಮೀನು ಇಷ್ಟು ಇರಬೇಕು ಎಂದು ಒಂದು ಇತಿಮಿತಿಯನ್ನು ಸರ್ಕಾರದವರು ಹಾಕಿದ್ದಾರೆಯೇ ? ಅನಂತರ ಹಿಂದುಳಿದ ವರ್ಗದವರಿಗೆ ಮತ್ತು ಬಡ ರೈತರಿಗೆ ಈ ಹೆಚ್ಚುವರಿ ಜಮೀನನ್ನು ಕೊಡುತ್ತೇವೆ ಎಂದು ಪದೇ ಪದೇ ಹೇಳುತ್ತಿದ್ದೀರಿ. ಅದನ್ನು ಕೊಡಲಿಕ್ಕೆ ಶಕ್ತ ಇದೆಯೇ ?

ಶ್ರೀ ಬಿ.ಆರ್. ಯಾವಗಲ್ (ಕಂದಾಯ ಮಂತ್ರಿಗಳ ಪರವಾಗಿ).— ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಜಮೀನಿನ ವಿಸ್ತೀರ್ಣದ ಬಗ್ಗೆ ನಿಖರವಾದ ಅಂಕಿಗಳು ಸರ್ಕಾರದಲ್ಲಿ ಇಲ್ಲ. ಇದೊಂದು ಅಸ್ಪಷ್ಟ ಚಿತ್ರಣ ಅದೂ ಇನ್ನೂ ಬರಬೇಕಾಗಿದೆ. ಇನ್ನು ಬೇರೆ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಬೇಕಾದಂಥ ಮತ್ತು ಮಾಡಬಹುದಾದ ಚಿಂತನೆ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಸಮಯ ಬಂದಾಗ ಇದನ್ನು ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಬಿ.ಆರ್. ನೀಲಕಠಪ್ಪ — ಒತ್ತುವರಿ ಭೂಮಿಯನ್ನು ಖಾಯಂ ಮಾಡಿಲ್ಲ ಎಂದು ಹೇಳುತ್ತೀರಿ. ಅವರನ್ನು ಖಾಯಂ ಮಾಡದೇ ಇದ್ದಿದ್ದರೆ ಅವರನ್ನು ಬಿಡಿಸುತ್ತೀರಾ ? ಬಿಡಿಸಿಬಿಟ್ಟಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಲ್ಲಾ ಎಂದರೆ ಆ ಜಮೀನು ಈಗ ಯಾರ ಹತ್ತಿರ ಇದೆ ಅದನ್ನು ಬಿಡಿಸಲಿಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಅಥವಾ ಏನು ಮಾಡುತ್ತೀರಿ ?

ಶ್ರೀ ಬಿ.ಆರ್. ಯಾವಗಲ್.— ಇವರು ಕೇಳಿದಂಥ ಒತ್ತುವರಿ ಜಮೀನನ್ನು ಬಿಡಿಸಬಹುದು ಆಗಿರಬಹುದು ಅಥವಾ ಹಿಂದುಳಿದವರಿಗೆ ಕೊಡುವುದೂ ಆಗಿರಬಹುದು, ಅಥವಾ ಮಿತಿಯನ್ನು ಹಾಕುವುದೂ ಆಗಿರಬಹುದು. ಇವೆಲ್ಲಾ ಪ್ರಶ್ನೆಗಳಿಗೆ ಇದೊಂದು ಸಮಗ್ರವಾದ ಒಂದು ತಿದ್ದುಪಡಿ ಅಥವಾ ಕಾಯ್ದೆಯ ಚೌಕಟ್ಟಿನಲ್ಲಿ ಬರುವಂಥ ವಿಷಯ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿ ಆದಷ್ಟು ಬೇಗ ಒಂದು ತೀರ್ಮಾನವನ್ನು ಕೂಡ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಆರ್. ನೀಲಕಂಠಪ್ಪ.— ಈ ಸಮಗ್ರ ಪರಿಶೀಲನೆ ಎಂಬುದರ ಬಗ್ಗೆ ಈ ಸರ್ಕಾರ ಬಂದ ಮೇಲೆ ಬಹಳ ಸಾರಿ ಆಗಿದೆ. ಅಧ್ಯಯನ ಕೂಡ ಮಾಡಿದೆ. ಇವೆಲ್ಲದಕ್ಕಿಂತ ಯಾವುದಾದರೂ ಕ್ರಮ ತೆಗೆದುಕೊಂಡರೆ ಉತ್ತಮವಾಗಿ ಆಗುತ್ತದೆ. ಪರಿಶೀಲನೆಯ ಕ್ರಮಕ್ಕಿಂತ ಅವರು ಶೀಘ್ರವಾಗಿ ಕ್ರಮ

ವನ್ನು ತೆಗೆದುಕೊಳ್ಳುತ್ತೇವೆಂದು ಹೋದ ವರ್ಷವೇ ಕಂದಾಯ ಸಚಿವರು ಹೇಳಿದ್ದರು. ಈ ವರ್ಷ ಇದನ್ನು ಕಾರ್ಯಗತ ಮಾಡಿದರೆ ಒಳ್ಳೆಯದಾಗುತ್ತದೆ. ಕಾಫಿ ಬೆಳೆಗಾರರಿಗೆ ಇಷ್ಟು ಎಕರೆ ಇರಬೇಕಂ ಎಂದು ಇತಿ ಮಿತಿ ಹಾಕಿಕೊಂಡು ಅದನ್ನು ಖಾಯಂ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್.— ಇದನ್ನು ಪರಿಶೀಲಿಸಿ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.— ಸಚಿವರು ಉತ್ತರ ಕೊಡುತ್ತಾ ಇಷ್ಟೆಲ್ಲಾ ಕಾಫಿ ತೋಟ ಇಟ್ಟುಕೊಂಡಿರುವವರು ಸಾವಿರಾರು ಎಕರೆ ಒತ್ತುವರಿ ಮಾಡಿಕೊಂಡಿದ್ದರೂ ಸಹಾ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಶ್ರೀ ರಾಮದಾಸ್ ಕೇಳಿದ ಪ್ರಶ್ನೆಯಲ್ಲಿ ಹರಿಜನರು ೩೦ ಎಕರೆ ಜಮೀನನ್ನು ಅಕ್ರಮ/ಸಾಗುವಳಿ ಮಾಡುತ್ತಿದ್ದರೂ ಅವರಿಗೇ ಜಮೀನನ್ನು ಖಾಯಂ ಮಾಡುವ ಬಗ್ಗೆಯೂ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಆದೇ ಶ್ರೀಮಂತರು ಸಾವಿರಾರು ಎಕರೆ ಭೂಮಿಯನ್ನು ಹೊಡೆಯುವಾಗ ಸರ್ಕಾರ ಸುಮ್ಮನೆ ಕುಳಿತುಕೊಂಡು ಬಡ ಹರಿಜನರ ೩೦ ಎಕರೆ ಅದನ್ನು ನಾವು ಸಾಗುವಳಿ ಮಾಡುತ್ತಿದ್ದೇವೆ. ಅದನ್ನು ನಮಗೆ ಕೊಡಿ ಎಂದು ಹೇಳುತ್ತಿದ್ದರೂ ಅವರ ಬಗ್ಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಶ್ರೀಮಂತರಿಗೆ ಒಂದು ಕಾನೂನೇ, ಬಡವರಿಗೆ ಒಂದು ಕಾನೂನೇ ? ಸಚಿವರು ಉತ್ತರ ಕೊಡಬೇಕು.

ಶ್ರೀ ಬಿ.ಆರ್. ಯಾವಗಲ್.— ಆ ಪ್ರಶ್ನೆಗೆ ಪೂರಕ ಪ್ರಶ್ನೆಗೆ ಕೇಳಿದ್ದರೆ. ಚೆನ್ನಾಗಿತ್ತು. ಮಾನ್ಯ ಸದಸ್ಯರಾದ ರಾಮದಾಸ್ ಕೇಳಿದ ಪ್ರಶ್ನೆಗೆ ಯಾರು ಬಗರ್‌ಹುಕುಂನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೇ ಜಮೀನನ್ನು ಹಂಚಲಾಗಿದೆಯೇ ಎಂದು ಕೇಳಿದ್ದಾರೆ, ಆ ಭೂಮಿ ಬಿಡುಗಡೆಯಾಗಿದೆ. ಅದು ಬೇರೆ ಕಡೆ ಇರುವುದು ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ರೀತಿ ಏನಾದರೂ ಇದ್ದರೆ ಸರ್ಕಾರದ ಗಮನಕ್ಕೆ ತಂದರೆ ಈ ವರ್ಗದವರಿಗೆ ಕೊಡುವುದಕ್ಕೆ ಸರ್ಕಾರ ಮುಂದೆ ಬರುತ್ತದೆ. ಇದು ಒಂದು ದೃಷ್ಟಿಯಿಂದ ನೋಡುವ ಸಮಸ್ಯೆ ಅಲ್ಲ. ಅನೇಕ ದೃಷ್ಟಿಕೋನಗಳಿಂದ ನೋಡಿ ಒಂದು ನಿಶ್ಚಿತವಾದ ನಿರ್ಧಾರಕ್ಕೆ ಸರ್ಕಾರ ಬರಬೇಕಾಗುತ್ತದೆ. ಆದಷ್ಟು ಬೇಗ ಈ ವಿಷಯದಲ್ಲಿಯೂ ಸರ್ಕಾರ ನಿರ್ಧಾರಕ್ಕೆ ಬರುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎ. ಚಿನ್ನಪ್ಪ— ಈ ಒತ್ತುವರಿ ಜಮೀನನ್ನು ಖಾಯಂ ಮಾಡುವ ಬಗ್ಗೆ ಮೈಸೂರು ಡಿವಿಜನಲ್ ಕಮೀಷನರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿತ್ತು. ಆ ಕಮಿಟಿಯವರು ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ಕಳಿಸಿದ್ದಾರೆಯೇ?

ಶ್ರೀ ಬಿ. ಆರ್. ಯಾವಗಲ್— ಮಾನ್ಯ ಅಧ್ಯಕ್ಷರೇ. ಆ ಕಮಿಟಿಯವರು ವರದಿಯನ್ನು ಕಳಿಸಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ವೇದಾಂತ ಹೆಮ್ಮಿಗೆ— ಆ ಬಡ ಜನರು ಯಾವುದಾದರೂ ಒಂದು ಚೂರು ಪಾರು ಭೂಮಿ ಅಕ್ರಮ ಮಾಡಿಕೊಂಡರೆ ಅಲ್ಲಿ ಬುಲ್ಡೋಜರ್ ಹೊಡೆಸುತ್ತೀರಿ. ಆದೇ ಶ್ರೀಮಂತರು ಸಾವಿರಾರು ಎಕರೆ ಜಮೀನನ್ನು ಅಕ್ರಮ ಮಾಡಿಕೊಂಡರೆ ನಿಮ್ಮ ಸರ್ಕಾರ ಏತಕ್ಕೆ ಬುಲ್ಡೋಜರ್ ಹೊಡೆಸಿಲ್ಲ.?

ಒಬ್ಬ ಮಾನ್ಯ ಸದಸ್ಯರು— ನಿಮ್ಮ ಸರ್ಕಾರ ಆಲ್ಲವೇ?

ಶ್ರೀ ಎಂ. ಎಸ್. ಪಾಟೀಲ್— ಈ ಕಡೆ ಬರಲಿ ಅವರು.

ಅಧ್ಯಕ್ಷರು— ನಿಮ್ಮ ಸರ್ಕಾರ ಎಂದರೆ ನಿಮ್ಮ ಖಾತೆ ಎಂದು ಅರ್ಥ.

ಶ್ರೀ ವೇದಾಂತ ಹೆಮ್ಮಿಗೆ— ನಮ್ಮ ಸರ್ಕಾರ ಸಾವಿರಾರು ಎಕರೆ ಜಮೀನನ್ನು ಶ್ರೀಮಂತರು ಕಾಫಿ ತೋಟಕ್ಕೆ ಒತ್ತುವರಿ ಮಾಡಿಕೊಂಡಿದ್ದಾರೆ. ಆದರೆ ಅದೇ ಒಬ್ಬ ಬಡವ ಮನೆ ಕಟ್ಟಿಸಿದರೆ ಬುಲ್ಡೋಜರ್ ಹೊಡೆಸುತ್ತೀರಿ. ಸಾವಿರಾರು ಎಕರೆ ಕಾಫಿ ತೋಟಕ್ಕೂ ಬುಲ್ಡೋಜರ್ ಹೊಡೆಸುತ್ತೀರಾ? ಆಶ್ವಾಸನೆ ಕೊಡಿ.

ಅಧ್ಯಕ್ಷರು— ನಿಮ್ಮ ಸಲಹೆಯನ್ನು ಪರಿಶೀಲಿಸುತ್ತೇನೆ ಎಂದು ಹೇಳಿ.

ಶ್ರೀ ಬಿ. ಆರ್. ಯಾವಗಲ್— ಅಧ್ಯಕ್ಷರೇ, ತಾವೇ ಉತ್ತರವನ್ನು ಹೇಳಿದ್ದೀರಿ. ನಾನು ಹೇಳುವ ಅಗತ್ಯ ಇಲ್ಲ. ಆದರೂ ಕೂಡ ಈ ವರ್ಗದ ಜನತೆ ಬಗ್ಗೆ ಸರ್ಕಾರಕ್ಕೆ ಎಲ್ಲಾ ರೀತಿಯ ಸಹಾನುಭೂತಿ ಇದೆ. ಅವರ ಪ್ರಶ್ನೆ ಬಂದಾಗ ನಾನು ಈಗಾಗಲೇ ಹೇಳಿದ್ದೇನೆ. ಒಂದೇ ದೃಷ್ಟಿಕೋನದಿಂದ ಈ ವಿಷಯವನ್ನು ನೋಡಬಾರದು ಎಂದು ಈಗಾಗಲೇ ಹೇಳಿದ್ದೇನೆ. ಇದಕ್ಕೆ ಬೇಕಾದಂಥ ಅನೇಕ ವಿಷಯಗಳ ಆಧಾರದ ಮೇಲೆ ಸಮಸ್ಯೆಯ ಹಿನ್ನೆಲೆಯಲ್ಲಿ ಸರ್ಕಾರ ಆದಷ್ಟು ಬೇಗ ಒಂದು ಬಿಲ್ಲನ್ನು ಸದನದ ಮುಂದೆ ಮಂಡಿಸುತ್ತದೆ, ಆದರೆ ಬಗ್ಗೆ ಚರ್ಚೆ ಮಾಡಬಹುದು.

ಅಧ್ಯಕ್ಷರು— ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ವಿದೇಶಿ ಮದ್ಯದ ಅಂಗಡಿಗಳಿಗೆ ಪರವಾನಗಿ ಕುರಿತು

೯೪೨. ಶ್ರೀ ಸಿ. ಎಂ. ಉದಾಸಿ (ಹಾನಗಲ್) ಮಾನ್ಯ ಅಬಕಾರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದೇಶಿ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವಾಗ ಸರಕಾರದವರು ಸಂದಾಯ ಮಾಡಿಕೊಳ್ಳುವ ಫೀ ಹಣ ೧ ವರ್ಷಕ್ಕೆ ಅಂದರೆ ಹಣ ತುಂಬಿದ ೧ ವರ್ಷಕ್ಕೋ ಅಥವಾ ಸರ್ಕಾರದವರು ನಿಗದಿ ಪಡಿಸಿದ ೧ ವರ್ಷಕ್ಕೊ?

ಆ) ಸರ್ಕಾರ ನಿಗದಿಪಡಿಸಿದ ವರ್ಷವಾದರೆ ಯಾವ ತಿಂಗಳಿನಿಂದ ಯಾವ ತಿಂಗಳವರೆಗೆ?

ಶ್ರೀ ರಮೇಶ ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು)

ಅ) ವಿದೇಶಿ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವಾಗ ಸಂದಾಯ ಮಾಡಿಕೊಳ್ಳುವ ಶುಲ್ಕ ಸರ್ಕಾರ ನಿಗದಿಪಡಿಸಿದ ಅವಧಿಗೆ ವರ್ಷಕ್ಕೆ ಅಗಿರುತ್ತದೆ.

ಆ) ಸರ್ಕಾರ ನಿಗದಿಪಡಿಸಿದ ಅಬಕಾರಿ ವರ್ಷವು ೧ನೇ ಜುಲೈನಿಂದ ಪ್ರಾರಂಭವಾಗಿ ೩೦ನೇ ಜೂನ್‌ಗೆ ಅಂತ್ಯಗೊಳ್ಳುತ್ತದೆ.

ತಾಲ್ಲೂಕು ಮಟ್ಟದ ಸಮಿತಿ

೯೪೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬರಗಾಲ ಕಾಮಗಾರಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ತಪ್ಪಿಸಲು ಸರ್ವ ಪಕ್ಷದ ಪ್ರಮುಖರನ್ನೊಳಗೊಂಡ ಒಂದು ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಲು ಸರ್ಕಾರದವರು ಉದ್ದೇಶಿಸಿರುವರೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು) –

ಅ) ಇಲ್ಲ

ಅಬಕಾರಿ ಗುತ್ತಿಗೆದಾರರು ತಿಂಗಳ ಕಂತನ್ನು ಸಂದಾಯ ಮಾಡುವ ಬಗ್ಗೆ

೯೪೯. ಶ್ರೀ ಬಿ. ಧರ್ಮಪ್ಪ (ಸಾಗರ) ಮಾನ್ಯ ಅಬಕಾರಿ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಬಕಾರಿ ಗುತ್ತಿಗೆದಾರರು ಪ್ರತಿ ತಿಂಗಳ ಕಂತನ್ನು ಪೂರ್ತಿಯಾಗಿ ಕಟ್ಟುತ್ತಿದ್ದಾರೆಯೇ.

ಆ) ಹಾಗಿಲ್ಲದಿದ್ದಲ್ಲಿ ಎಷ್ಟು ಜನ ಮತ್ತು ಅವರ ಹೆಸರುಗಳೊಡನೆ ಬಾಕಿದಾರರೆಂದು ತಿಳಿಸುವುದು.

ಇ) ಹಾಗೆ ಬಾಕಿದಾರರಾದವರ ಮೇಲೆ ವಸೂಲಾತಿ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?